12. D.K. District	55
13. Kodagu	21
14. Belgaum	20
15. Uttar Kannada	19
16. Dharwar	41
17. Bijapur	23
18. Gulbarga	08
19. Bellary	29
20. Raichur	17
21. Bidar	14
Total	**1058**

ಶ್ರೀ ಎಸ್. ಶಫಿ ಅಹಮದ್ : ಇಂಗ್ಲೀಷ್ ಸ್ಕೂಲ್‌ಗಳನ್ನು ಸರ್ಕಾರಿ ಅತಿ ಶೀಘ್ರದಲ್ಲಿ ಮಾಡುತ್ತೇವೆಂದು ರಿಪ್ಲೈ ಕೊಟ್ಟಿದ್ದಾರೆ. ಆರು ತಿಂಗಳಿನಿಂದ ಇದೇ ರೀತಿ ಉತ್ತರ ಬರುತ್ತಲೇ ಇದೆ. ಮತ್ತು ಇವೊತ್ತು ಸರ್ಕಾರದ ಮುಂದೆ 483 ಅರ್ಜಿಗಳು ಪೆಂಡಿಂಗ್ ಇದೆಯೆಂದು ಹೇಳಿದ್ದಾರೆ. ತಾವು ಎಷ್ಟು ದಿವಸಗಳಲ್ಲಿ ಮಂಜೂರು ಮಾಡಿಕೊಡುತ್ತೀರಿ?

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಅಧ್ಯಕ್ಷರೇ, ಹಿಂದೆ ಈ ಸದನದಲ್ಲಿ ಉತ್ತರ ಕೊಟ್ಟ ನಂತರ ಬಹಳ ಪ್ರಗತಿಯಾಗಿದೆ. ತಜ್ಞರ ಸಮಿತಿ ಈಗಾಗಲೇ ಶಿಫಾರಸ್ಸು ಮಾಡಿದೆ. ಆ ಶಿಫಾರಸ್ಸುಗಳನ್ನು ಶಿಕ್ಷಣ ಇಲಾಖೆಯವರು ಪರಿಶೀಲನೆ ಮಾಡಿ, ವಿಶ್ಲೇಷಣೆ ಮಾಡಿ ಕ್ಯಾಬಿನೆಟ್‌ಗೆ ಕಳುಹಿಸಿದ್ದಾರೆ. ಅದಿನ್ನೂ ಕ್ಯಾಬಿನೆಟ್‌ನಲ್ಲೇ ಇದೆ. any day ನಿರ್ಣಯವಾಗುತ್ತದೆ.

ಶ್ರೀ ಎಸ್. ಶಫಿ ಅಹಮದ್ : ಕಳೆದ ಆರು ತಿಂಗಳಿಂದಲೂ ಇದೇ ಉತ್ತರ ಬರುತ್ತಿದೆ.

ಅಧ್ಯಕ್ಷರು : ಸ್ವಲ್ಪ ಪ್ರಗತಿಯಾಗಿದೆಯೆಂದು ಹೇಳುತ್ತಿದ್ದಾರಲ್ಲಾ. ಆರು ತಿಂಗಳಿಗೊಮ್ಮೆ ಪ್ರಗತಿಯಾಗುತ್ತದೆ.

ರೈತರ ಪಂಪುಸೆಟ್‌ಗಳಿಗೆ ವಿದ್ಯುತ್ ಸರಬರಾಜು

2427 - ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) : ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1989 ರಿಂದ 1991 ರವರೆಗೆ ರಾಜ್ಯದಲ್ಲಿ ರೈತರ ಪಂಪುಸೆಟ್ಟುಗಳಿಗೆ ವಿದ್ಯುತ್ ಸರಬರಾಜು ಒದಗಿಸಲಾದ ಸಂಖ್ಯೆ ಎಷ್ಟು? (ಜಿಲ್ಲಾ ಹಾಗೂ ತಾಲ್ಲೂಕುವಾರು ಅಂಕಿ ಅಂಶಗಳನ್ನು ಒದಗಿಸುವುದು)

ಆ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಉಪ-ವಿಭಾಗಗಳಲ್ಲಿ ವಿದ್ಯುತ್ ಪೂರೈಕೆ ಮಾಡಲು ಸಾಮಗ್ರಿಗಳ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) 1989ರಿಂದ 1991ರವರೆಗೆ ಉಪ-ವಿಭಾಗಗಳಿಗೆ ಪೂರೈಸಿದ ಸಾಮಗ್ರಿಗಳೆಷ್ಟು? (ಜಿಲ್ಲಾ ಮತ್ತು ಉಪ-ವಿಭಾಗವಾರು ಮಾಹಿತಿಯನ್ನೊದಗಿಸುವುದು)

ಈ) ರಾಜ್ಯದಲ್ಲಿ ಇನ್ನು ವಿದ್ಯುತ್ ಪೂರೈಕೆಯಾಗದೆ ಇರುವ ಗ್ರಾಮಗಳೆಷ್ಟು ಮತ್ತು ರೈತರ ಪಂಪುಸೆಟ್ಟುಗಳೆಷ್ಟು? (ಜಿಲ್ಲಾ ಹಾಗೂ ತಾಲ್ಲೂಕುವಾರು ಮಾಹಿತಿಗಳನ್ನೊದಗಿಸುವುದು)

ಉ) ಉಳಿದ ಗ್ರಾಮಗಳಿಗೆ ಹಾಗೂ ಪಂಪುಸೆಟ್ಟುಗಳಿಗೆ ವಿದ್ಯುತ್ ಪೂರೈಕೆಯನ್ನು ಎಂದಿನಿಂದ ಮಾಡಲಾಗುವುದು?

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಸಚಿವರು) :

ಅ) 1989-90 ಮತ್ತು 1990-91 ರ ಸಾಲುಗಳಲ್ಲಿ ರಾಜ್ಯದಲ್ಲಿ ವಿದ್ಯುದ್ದೀಕರಣಗೊಂಡ ನೀರಾವರಿ ಪಂಪುಸೆಟ್ಟುಗಳ ಸಂಖ್ಯೆ ಅನುಕ್ರಮವಾಗಿ 41, 786 ಮತ್ತು 70,138 ಜಿಲ್ಲಾ ಹಾಗೂ ತಾಲ್ಲೂಕುವಾರು ಅಂಕಿ ಅಂಶಗಳನ್ನು ಅನುಬಂಧ-1 ರಲ್ಲಿ ನೀಡಿದೆ.

ಆ) ಇಲ್ಲಿ ಪ್ರತಿ ತಾಲ್ಲೂಕಿಗೆ ಆಯಾ ತಾಲ್ಲೂಕಿನಲ್ಲಿ ವಿದ್ಯುದೀಕರಣಕ್ಕೆ ನಿಗದಿ ಪಡಿಸಿರುವ ಉಪಗ್ರಾಮ, ಹರಿಜನ ಬಸ್ತಿ ನೀರಾವರಿ ಪಂಪುಸೆಟ್ಟುಗಳು ಇತ್ಯಾದಿ ಸಂಖ್ಯೆಗಳಿಗೆ ಅನುಗುಣವಾಗಿ ಗುರಿ ಸಾಧಿಸಲು ಬೇಕಾಗುವ ಸಾಮಗ್ರಿಗಳನ್ನು ಸರಬರಾಜು ಮಾಡಲು ಮಂಡಳಿಯು ಕ್ರಮ ತೆಗೆದುಕೊಳ್ಳುತ್ತಿದೆ.

ಇ) ಜಿಲ್ಲಾ ಮತ್ತು ಉಪ-ವಿಭಾಗವಾರು ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದ್ದು, ನಂತರ ಒದಗಿಸಲಾಗುವುದು.

ಈ) 1981ರ ಜನಗಣತಿ ಪ್ರಕಾರ ಜನಸಂಖ್ಯೆಯಿರುವ ಎಲ್ಲಾ 26, 483 ಕಂದಾಯ ಗ್ರಾಮಗಳನ್ನು ವಿದ್ಯುದ್ದೀಕರಿಸಲಾಗಿದ್ದು, 31.3.89 ರಲ್ಲಿ ಶತಸಪ ವಿದ್ಯುದ್ದೀಕರಣವನ್ನು ಸಾಧಿಸಿದೆ. ಹೀಗಾಗಿ 1981 ಜನಗಣತಿ ಪ್ರಕಾರ ಜನ ವಾಸ ಇರುವ ಯಾವ ಕಂದಾಯ ಗ್ರಾಮವು ವಿದ್ಯುದ್ದೀಕರಣಕ್ಕಾಗಿ ಬಾಕಿ ಉಳಿದಿಲ್ಲ.

30 ನೇ ಜೂನ್ 1991 ರಲ್ಲಿರುವಂತೆ ರಾಜ್ಯದಲ್ಲಿ ಒಟ್ಟು 89, 920 ನೀರಾವರಿ ಪಂಪುಸೆಟ್ಟು ಅರ್ಜಿಗಳು ಪೂರೈಕೆಗಾಗಿ ಮಂಡಳಿಯ ಕ್ರಮಕ್ಕಾಗಿ ಬಾಕಿ ಉಳಿದಿದ್ದವು. ಹಾಗೂ ಅರ್ಜಿದಾರರು ಪಾಲಿಸಬೇಕಾದ ವಿಧಿವಿಧಾನಗಳಿಗಾಗಿ 15,025 ಅರ್ಜಿಗಳು ಬಾಕಿಯಿದ್ದು ಇವೆರಡರ ಮೊತ್ತ 54, 945 ಅರ್ಜಿಗಳು ಬಾಕಿ ಉಳಿದಂತಾಗಿರುತ್ತದೆ. ಜಿಲ್ಲಾವಾರು ಮಾಹಿತಿಯನ್ನು ಅನುಬಂಧ 2 ರಲ್ಲಿ ನೀಡಿದೆ. ತಾಲ್ಲೂಕುವಾರು ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದ್ದು ನಂತರ ಒದಗಿಸಲಾಗುವುದು.

ಉ) 'ಈ' ಕ್ಕೆ ನೀಡಿರುವ ಉತ್ತರದಂತೆ, ಕಂದಾಯ ಗ್ರಾಮಗಳ ವಿದ್ಯುದ್ದೀಕರಣದ ಪ್ರಶ್ನೆ ಉದ್ಭವಿಸುವುದಿಲ್ಲ. ನೀರಾವರಿ ಪಂಪುಸೆಟ್ಟುಗಳ ವಿದ್ಯುದ್ದೀಕರಣವನ್ನು 1990-91 ನೇ ಸಾಲಿನಿಂದ ತೀವ್ರಗೊಳಿಸಲಾಗಿದೆ. ಈ ಸಾಲಿನಲ್ಲೂ ಸಹ ಕಳೆದ ಸಾಲಿನಂತೆ 60,000 ನೀರಾವರಿ ಪಂಪುಸೆಟ್ಟುಗಳನ್ನು ವಿದ್ಯುದ್ದೀಕರಿಸಲು ಗುರಿ ನಿಗಧಿ ಪಡಿಸಲಾಗಿದ್ದು, ಈ ಗುರಿಯನ್ನು ಸಾಧಿಸಲು ಅಗತ್ಯವಿರುವ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಕ್ರಮ ಸಂಖ್ಯೆ	ಜಿಲ್ಲೆ ಮತ್ತು ತಾಲ್ಲೂಕು	ಸಾಧನೆ 1989-90	1990-91
1	2	3	4
	ಬೆಂಗಳೂರು ಜಿಲ್ಲೆ		
1.	ಅನೇಕಲ್	385	647
2.	ಬೆಂಗಳೂರು ಉತ್ತರ	198	222
3.	ಬೆಂಗಳೂರು ದಕ್ಷಿಣ	349	440
4.	ಚನ್ನಪಟ್ಟಣ	550	993
5.	ದೇವನಹಳ್ಳಿ	312	510
6.	ದೊಡ್ಡಬಳ್ಳಾಪುರ	369	560
7.	ಹೊಸಕೋಟೆ	470	718

1 2	3	4
8. ಕನಕಪುರ	551	935
9. ಮಾಗಡಿ	229	410
10. ನೆಲಮಂಗಲ	286	450
11. ರಾಮನಗರ	309	705
ಒಟ್ಟು	**4,008**	**6,590**
ಬೆಳಗಾಂ ಜಿಲ್ಲೆ		
1. ಅಥಣಿ	864	1,405
2. ಬೆಳಗಾಂ	419	670
3. ಚಿಕ್ಕೋಡಿ	824	1,141
4. ಗೋಕಾಕ್	671	976
5. ಹುಕ್ಕೇರಿ	-	-
6. ಖಾನಾಪುರ	450	493
7. ಸೌಂದಟ್ಟಿ	568	686
8. ರಾಯಭಾಗ್	611	758
9. ರಾಮದುರ್ಗ	288	416
10. ಸಂಪಗಾನ್	582	644
ಒಟ್ಟು	**5,277**	**7,189**
ಬಳ್ಳಾರಿ ಜಿಲ್ಲೆ		
1. ಬಳ್ಳಾರಿ	168	213
2. ಹಡಗಲಿ	134	501
3. ಹರಪನಹಳ್ಳಿ	210	502
4. ಹೊಸಪೇಟೆ	164	20
5. ಕೂಡ್ಲಗಿ	234	515
6. ಮಲ್ಲಾಪುರ	174	377
7. ಸಂಡೂರು	66	102
8. ಸಿರಗುಪ್ಪ	93	201
ಒಟ್ಟು	**1,243**	**2,615**
ಬೀದರ್ ಜಿಲ್ಲೆ		
1. ಔರಾದ್	178	170
2. ಬಸವಕಲ್ಯಾಣ	255	338
3. ಭಾಲ್ಕಿ	170	318
4. ಬೀದರ್	372	611

1 2	3	4
5. ಹುಮ್ನಾಬಾದ್	473	503
ಒಟ್ಟು	**1,457**	**1,940**
ಬಿಜಾಪುರ ಜಿಲ್ಲೆ		
1. ಬಾದಾಮಿ	320	482
2. ಬಾಗಲಕೋಟೆ	182	199
3. ಬಾಗೇವಾಡಿ	305	358
4. ಜಿಜಾಪುರ	564	769
5. ಬೀಳಗಿ	140	179
6. ಹುನಗುಂದ	162	129
7. ಇಂಡಿ	640	1,112
8. ಜಮಖಂಡಿ	525	668
9. ಮುದ್ದೇಬಿಹಾಳ್	204	339
10. ಮುದೋಳ್	487	828
11. ಸಿಂಧಗಿ	416	654
ಒಟ್ಟು	**3,945**	**5,717**
ಚಿಕ್ಕಮಗಳೂರು ಜಿಲ್ಲೆ		
1. ಚಿಕ್ಕಮಗಳೂರು	68	157
2. ಕಡೂರು	265	601
3. ಕೊಪ್ಪ	43	106
4. ಮೂಡಿಗೆರೆ	27	41
5. ನರಸಿಂಹರಾಜಪುರ	23	39
6. ಶೃಂಗೇರಿ	7	38
7. ತರೀಕೆರೆ	212	363
ಒಟ್ಟು	**645**	**1,345**
ಚಿತ್ರದುರ್ಗ ಜಿಲ್ಲೆ		
1. ಚಳ್ಳಕೆರೆ	311	500
2. ಚಿತ್ರದುರ್ಗ	368	608
3. ದಾವಣಗೆರೆ	400	654
4. ಹರಿಹರ	227	284
5. ಹಿರಿಯೂರು	258	621
6. ಹೊಳಲಕೆರೆ	275	444
7. ಹೊಸದುರ್ಗ	170	344

1	2	3	4
8.	ಜಗಲೂರು	246	423
9.	ಮೊಳಕಾಲ್ಮೂರು	86	223
	ಒಟ್ಟು	2,341	4,101
ಕೊಡಗು ಜಿಲ್ಲೆ			
1.	ಮಡಿಕೇರಿ	29	52
2.	ಸೋಮವಾರಪೇಟೆ	69	92
3.	ವಿರಾಜಪೇಟೆ	61	126
	ಒಟ್ಟು	159	270
ಧಾರವಾಡ ಜಿಲ್ಲೆ			
1.	ಬ್ಯಾಡಗಿ	169	172
2.	ಧಾರವಾಡ	242	378
3.	ಗದಗ್	89	101
4.	ಹಾನಗಲ್	182	319
5.	ಹಾವೇರಿ	299	415
6.	ಹಿರೇಕೇರೂರು	302	301
7.	ಹುಬ್ಬಳ್ಳಿ	75	164
8.	ಕಲಘಟಗಿ	162	251
9.	ಕುಂದಗೋಳ್	21	39
10.	ಮುಂಡರಗಿ	47	147
11.	ನವಲಗುಂದ	44	79
12.	ನರಗುಂದ	40	52
13.	ರಾಣೆಬೆನ್ನೂರು	234	405
14.	ರೋಣ	248	338
15.	ಸವಣೂರು	117	227
16.	ಶಿಗ್ಗಾನ್	87	129
17.	ಶಿರಹಟ್ಟಿ	117	224
	ಒಟ್ಟು	2,465	2,741
ಗುಲ್ಬರ್ಗಾ ಜಿಲ್ಲೆ			
1.	ಅಫ್ಜಲ್‌ಪುರ	267	380
2.	ಅಲಂದ್	245	461
3.	ಚಿಂಚೋಳಿ	105	163
4.	ಚಿತ್ತಾಪುರ	52	151

1 2	3	4
5. ಗುಲ್ಬರ್ಗಾ	220	455
6. ಜೆವರ್ಗಿ	104	166
7. ಸೇಡಂ	48	81
8. ಶಹಾಪುರ	40	101
9. ಶೋರಾಪುರ	45	72
10. ಯಾದಗಿರ್	108	156
ಒಟ್ಟು	1,234	2,186
ಹಾಸನ ಜಿಲ್ಲೆ		
1. ಆಲೂರು	24	61
2. ಅರಕಲಗೂಡು	84	169
3. ಅರಸೀಕೆರೆ	299	761
4. ಬೇಲೂರು	204	250
5. ಚನ್ನರಾಯಪಟ್ಟಣ	448	1,280
6. ಹಾಸನ	182	363
7. ಹೊಳೆನರಸೀಪುರ	43	69
8. ಸಕಲೇಶಪುರ	75	74
ಒಟ್ಟು	1,359	3,027
ಕೋಲಾರ ಜಿಲ್ಲೆ		
1. ಬಾಗೇಪಲ್ಲಿ	175	331
2. ಬಂಗಾರಪೇಟೆ	398	483
3. ಚಿಕ್ಕಬಳ್ಳಾಪುರ	357	590
4. ಚಿಂತಾಮಣಿ	411	667
5. ಗೌರಿಬಿದನೂರು	376	672
6. ಗುಡಿಬಂಡ	76	106
7. ಕೋಲಾರ	486	715
8. ಮಾಲೂರು	524	906
9. ಸಿಡ್ಲಘಟ್ಟ	278	635
10. ಮುಳಬಾಗಿಲು	265	392
11. ಶ್ರೀನಿವಾಸಪುರ	337	702
ಒಟ್ಟು	3,683	6,199

1 2	3	4
ಮಂಡ್ಯ ಜಿಲ್ಲೆ		
1. ಕೃಷ್ಣರಾಜಪೇಟೆ	109	491
2. ಮದ್ದೂರು	114	380
3. ಮಳವಳ್ಳಿ	180	454
4. ಮಂಡ್ಯ	112	236
5. ನಾಗಮಂಗಲ	79	250
6. ಪಾಂಡವಪುರ	25	110
7. ಶ್ರೀರಂಗಪಟ್ಟಣ	42	85
ಒಟ್ಟು	661	2,006
ಮೈಸೂರು ಜಿಲ್ಲೆ		
1. ಚಾಮರಾಜನಗರ	823	495
2. ಗುಂಡ್ಲುಪೇಟೆ	254	551
3. ಹೆಗ್ಗಡದೇವನಕೋಟೆ	82	283
4. ಹುಣಸೂರು	91	349
5. ಕೊಳ್ಳೇಗಾಲ	217	461
6. ಕೆ.ಆರ್.ನಗರ	61	80
7. ಮೈಸೂರು	134	292
8. ನಂಜನಗೂಡು	147	402
9. ಪೆರಿಯಾಪಟ್ಟಣ	37	138
10. ಟಿ.ನರಸೀಪುರ	222	280
11. ಯಳಂದೂರು	43	78
ಒಟ್ಟು	1,611	3,409
ಉತ್ತರ ಕನ್ನಡ ಜಿಲ್ಲೆ		
1. ಅಂಕೋಲ	62	75
2. ಭಟ್ಕಳ	114	99
3. ಹಳಿಯಾಳ	59	84
4. ಹೊನ್ನಾವರ	300	229
5. ಕಾರವಾರ	72	94
6. ಕುಮಟ	202	178
7. ಮುಂದಗೋಡ್	46	44
8. ಸಿದ್ದಾಪುರ	78	140

1 2	3	4
9. ಸಿರಸಿ	163	201
10. ಸೂಪ	14	31
11. ಯಲ್ಲಾಪುರ	53	125
ಒಟ್ಟು	1,163	1,300
ರಾಯಚೂರು ಜಿಲ್ಲೆ		
1. ದೇವದುರ್ಗ	141	316
2. ಗಂಗಾವತಿ	217	473
3. ಕೊಪ್ಪಲ್	230	470
4. ಕುಷ್ಟಗಿ	242	345
5. ಲಿಂಗಸಗೂರು	218	433
6. ಮಾನ್ವಿ	97	328
7. ರಾಯಚೂರು	204	290
8. ಸಿಂಧನೂರು	147	197
9. ಯಲ್ಬುರ್ಗ	248	512
ಒಟ್ಟು	1,744	3,372
ಶಿವಮೊಗ್ಗ ಜಿಲ್ಲೆ		
1. ಭದ್ರಾವತಿ	97	100
2. ಚನ್ನಗಿರಿ	318	407
3. ಹೊನ್ನಾಳಿ	208	412
4. ಹೊಸನಗರ	85	100
5. ಸಾಗರ	76	120
6. ಶಿಕಾರಿಪುರ	168	313
7. ಶಿವಮೊಗ್ಗ	110	223
8. ಸೊರಬ	129	146
9. ತೀರ್ಥಹಳ್ಳಿ	109	204
ಒಟ್ಟು	1,250	2,025
ದಕ್ಷಿಣ ಕನ್ನಡ ಜಿಲ್ಲೆ		
1. ಬೆಳ್ತಂಗಡಿ	255	541
2. ಭಂಟವಾಳ್	325	1,150
3. ಕುಂದಾಪುರ	438	745
4. ಕಾರ್ಕಳ	358	489
5. ಮಂಗಳೂರು	380	524

1 2	3	4
6. ಪುತ್ತೂರು	286	758
7. ಸೂಳ್ಯ	254	551
8. ಉಡುಪಿ	760	754
ಒಟ್ಟು	3,056	5,512
ತುಮಕೂರು ಜಿಲ್ಲೆ		
1. ಚಿಕ್ಕನಾಯಕನಹಳ್ಳಿ	315	739
2. ಗುಬ್ಬಿ	709	1,198
3. ಕೊರಟಗೆರೆ	339	503
4. ಕುಣಿಗಲ್	346	582
5. ಮಧುಗಿರಿ	287	505
6. ಪಾವಗಡ	174	321
7. ಶಿರ	318	462
8. ತಿಪಟೂರು	585	1,221
9. ತುಮಕೂರು	582	958
10. ತುರುವೇಕೆರೆ	351	574
ಒಟ್ಟು	3,946	7,063
ಕ.ವಿ.ಮಂ. - ಒಟ್ಟು	41,247	69,607
ಹುಕ್ಕೇರಿ ತಾಲ್ಲೂಕು ಗ್ರಾಮೀಣ ವಿದ್ಯುತ್ ಸಹಕಾರ ಸಂಘ ನಿಯಮಿತ	539	531
ರಾಜ್ಯ - ಒಟ್ಟು	41,786	70,138

ಕ್ರ. ಸಂ.	ಜಿಲ್ಲೆಗಳು	ಆರ್ಜಿದಾರರು ನಿರ್ವಹಿಸಬೇಕಾದ ವಿಧಿ ವಿಧಾನಗಳಿಗೆ ಬಾಕಿ ಉಳಿದಿರುವ ಆರ್ಜಿಗಳ ಸಂಖ್ಯೆ	ಮಂಡಳಿಯ ಕ್ರಮಕ್ಕಾಗಿ ಬಾಕಿ ಉಳಿದಿರುವ ಆರ್ಜಿಗಳ ಸಂಖ್ಯೆ	ಒಟ್ಟು ಆರ್ಜಿಗಳ ಸಂಖ್ಯೆ
1	2	3	4	5
1.	ಬೆಂಗಳೂರು	1,601	3,209	4,810
2.	ಬೆಳಗಾಂ	1,260	2,790	4,056
3.	ಬಳ್ಳಾರಿ	483	786	1,269
4.	ಬೀದರ್	394	1,100	1,494
5.	ಬಿಜಾಪುರ	1,226	3,952	5,178

6.	ಚಿಕ್ಕಮಗಳೂರು	315	2,448	2,763
7.	ಚಿತ್ರದುರ್ಗ	993	2,337	3,330
8.	ಕೊಡಗು	99	446	545
9.	ಧಾರವಾಡ	803	1,397	2,200
10.	ಗುಲ್ಬರ್ಗಾ	496	3,047	3,543
11.	ಹಾಸನ	764	3,712	4,476
12.	ಕೋಲಾರ	658	1,332	1,990
13.	ಮಂಡ್ಯ	611	1,483	2,094
14	ಮೈಸೂರು	1,542	2,173	3,715
15.	ಉತ್ತರ ಕನ್ನಡ	433	1,251	1,684
16.	ರಾಯಚೂರು	668	709	1,377
17.	ಶಿವಮೊಗ್ಗ	538	1,259	1,797
18.	ದಕ್ಷಿಣ ಕನ್ನಡ	1,562	4,925	6,487
19.	ತುಮಕೂರು	579	1,558	2,137
ಒಟ್ಟು		**15,025**	**39,920**	**54,945**

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ಉತ್ತರ ನೋಡಿದರೆ ಬಹಳ ಸಂತೋಷಪಡಬೇಕು. ಕಾರಣವೇನೆಂದರೆ, 60 ಸಾವಿರ ಗುರಿ ಇಟ್ಟುಕೊಂಡು 70 ಸಾವಿರಕ್ಕಿಂತ ಹೆಚ್ಚು ನೀರಾವರಿ ಪಂಪುಸೆಟ್ಟುಗಳನ್ನು ಈ ಸಾರಿ ವಿದ್ಯುದ್ದೀಕರಿಸಿದ್ದೇವೆಂದು ಹೇಳಿದ್ದಾರೆ. ಕೋಲಾರ ಜಿಲ್ಲೆ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಕಳೆದ ಕೆಲವು ದಿವಸಗಳಿಂದ ನಾನು ಪ್ರವಾಸ ಮಾಡಿದ್ದೇನೆ. ಮೊನ್ನೆ ನಾನು ಕೈವಾರ ಮತ್ತು ಶ್ರೀನಿವಾಸಪುರದಲ್ಲಿ ಪ್ರವಾಸ ಮಾಡಿದ್ದೇನೆ. ನಿನ್ನೆ ನಡೆದಿರತಕ್ಕಂಥ ಗಲಭೆಗಳನ್ನು ಉದಾಹರಣೆಗೆ ತೆಗೆದುಕೊಳ್ಳಬಹುದು. ವಿದ್ಯುಚ್ಛಕ್ತಿಯನ್ನು ಸರಿಯಾಗಿ ಒದಗಿಸಿಲ್ಲದಿರುವ ಕಾರಣದಿಂದ ನಿನ್ನೆ ಶ್ರೀನಿವಾಸಪುರದಲ್ಲಿ ಗಲಭೆಯಾಗಿದೆ. ಮೊನ್ನೆ ನಾವು, ವಿರೋಧಪಕ್ಷದ ಮುಖಂಡರೆಲ್ಲ ಕೈವಾರಕ್ಕೆ ಹೋಗಿದ್ದೆವು. ಆಗ ಅಲ್ಲಿಯ ಜನ ನಮ್ಮನ್ನು ಅಡ್ಡಗಟ್ಟಿ ಕೇಳಿದ್ದರು. ದಿನಕ್ಕೆ ಕನಿಷ್ಟ ಎರಡು ಗಂಟೆ ವಿದ್ಯುಚ್ಛಕ್ತಿ ಕೊಡಿಸಿ, ಈ ಸಾರಿ ಮಳೆ ಆಗಿಲ್ಲ ಎಂದರು. ಈ ಹಿನ್ನೆಲೆಯಲ್ಲಿ ರಾಜ್ಯದ ರೈತರಿಗೆ ವಿದ್ಯುಚ್ಛಕ್ತಿ ಇಲಾಖೆಯ ಲೆಕ್ಕದಂತೆ ನಡೆಯುತ್ತಿಲ್ಲ. ದಯಮಾಡಿ, ಇವೊತ್ತು ಅಥವಾ ನಾಳೆಯಾದರೂ ಅಲ್ಲಿಗೆ ಹೋಗಿ ಈ ಪರಿಸ್ಥಿತಿಯನ್ನು ವಿಮರ್ಶೆ ಮಾಡುವುದಕ್ಕೆ ನೀವು ಪ್ರಯತ್ನ ಮಾಡುತ್ತೀರೋ ಕನಿಷ್ಟ ರೈತರು ಕೇಳಿದ ಹಾಗೆ, ವಿದ್ಯುಚ್ಛಕ್ತಿಯನ್ನು ಕನಿಷ್ಟ ನಾಲ್ಕು ಗಂಟೆಯಾದರೂ ನಿರ್ಭಾಧಿತವಾಗಿ ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡುವುದಕ್ಕೆ ನೀವೇನಾದರೂ ಆಲೋಚನೆ ಮಾಡುತ್ತೀರ?

ಶ್ರೀ ಎಂ. ರಾಮಪ್ಪ : ಆಲೋಚನೆ ಮಾಡುತ್ತಿದ್ದೇವೆ, ಪ್ರಯತ್ನವನ್ನೂ ಮಾಡುತ್ತಿದ್ದೇವೆ, ಆದಷ್ಟು ಬೇಗ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಡಿ.ಬಿ. ಚಂದ್ರೇಗೌಡ : ನಿಮಗೆ ಆಲೋಚನೆ ಮಾಡುವುದಕ್ಕೆ ಎಷ್ಟು ಸಮಯ ಬೇಕು? ಪ್ರಯತ್ನ ಮಾಡುವುದಕ್ಕೆ ಎಷ್ಟು ಸಮಯ ಬೇಕು? ಜಿಲ್ಲೆಗಳಿಗೆ ಹೋಗುವುದಕ್ಕೆ ಎಷ್ಟು ಸಮಯ ಬೇಕು? ಅಥವಾ ನಿನ್ನೆ ಶ್ರೀನಿವಾಸಪುರದಲ್ಲಿ ಗಲಭೆ ನಡೆದ ಹಾಗೆ, ನಮ್ಮ ರೈತರು ಪೋಲೀಸರಿಂದ ಹೊಡೆತ ತಿಂದು, ಅವರನ್ನು ಆಸ್ಪತ್ರೆಗಳಿಗೆ ಹಾಕಿಸುವ ಪ್ರಯತ್ನ ಮಾಡುತ್ತೀರೋ? ಯಾವ ಪ್ರಯತ್ನ ತಾವು ಮಾಡುತ್ತೀರಿ? ದಯಮಾಡಿ, ಈ ವಿಚಾರವನ್ನು ತಾವು ಗಂಭೀರವಾಗಿ ತೆಗೆದುಕೊಳ್ಳಬೇಕು.

ನಾನು ಇಲ್ಲಿ ಲಘುವಾಗಿ ಯಾವುದೋ ಕಾರಣಕ್ಕಾಗಿ ವಿಷಯವನ್ನು ಪ್ರಸ್ತಾಪ ಮಾಡುತ್ತಿಲ್ಲ. 3-4 ದಿವಸಗಳ ಹಿಂದೆ ನಾವೇ ಖುದ್ದಾಗಿ ಒಟ್ಟಿಗೆ ಹೋಗಿ ನೋಡಿಬಂದಿದ್ದೇವೆ. ಎಂತಹ ಪರಿಸ್ಥಿತಿಯಾಗಿದೆ ಎಂದರೆ, ಒಂದು ಕಡೆ ಪಂಪುಸೆಟ್ಟುಗಳಿಗೆ ಕರೆಂಟ್ ಕೊಡಿ ಎಂದು ಕೇಳಿದ್ದಾರೆ. ಅದಕ್ಕಾಗಿ ಕೆಲವಾರು ದಿವಸಗಳಿಂದ ರೈತರು ಕಾಯಬೇಕಾದಂಥ ಪ್ರಸಂಗ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್ ಮತ್ತು ಉಳಿದ ಬ್ಯಾಂಕುಗಳಲ್ಲಿ ಸಾಲ ಮಾಡಿ, ರೈತರಿಗೆ ಪಂಪ್‌ಸೆಟ್ ಇಲ್ಲ. ಅಲ್ಲದೆ, ಸಾಲದ ಮೇಲೆ ಬಡ್ಡಿ. ಕೊಟ್ಟಿರತಕ್ಕಂಥ ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಇಲ್ಲವೆಂದರೆ ಯಾವ ಮಟ್ಟಕ್ಕೆ ಹೋಗಿದೆ? ಅದು ಇಲ್ಲಿಗೆ ಹತ್ತಿರವಿದೆ. ಇಲ್ಲಿಂದ ಹೋಗುವುದಕ್ಕೆ ಒಂದು ಗಂಟೆಯಾಗುತ್ತದೆ. ಇವೊತ್ತೋ ನಾಳೆಯೋ ಅಲ್ಲಿಗೆ ಹೋಗಿ ಬನ್ನಿ, ರೈತರ ಸಮಸ್ಯೆಯನ್ನು ಅರ್ಥಮಾಡಿಕೊಳ್ಳಿ ಎಂದು ಹೇಳಿದೆ. ಅವರು ನಮ್ಮನ್ನು 'ಫೇರಾವ್' ಮಾಡಿದ ಸಂದರ್ಭದಲ್ಲಿ ಹೇಳಿದರು. ಸ್ವಾಮಿ, ಕನಿಷ್ಟ ಇಂತಿಷ್ಟು ಸಮಯಕ್ಕೆ ವಿದ್ಯುಚ್ಛಕ್ತಿಯನ್ನು ಕೊಡುತ್ತೇವೆ, ನಾಲ್ಕು ಗಂಟೆ ಕಾಲ ಕೊಡುತ್ತೇವೆಂದು ಹೇಳಿ, ಅಷ್ಟೇ ಸಾಕು, ಅದಕ್ಕಿಂತ ಹೆಚ್ಚೇನೂ ಬೇಡ ಎಂದು ಹೇಳಿದರು. ಈ ವಿಚಾರದಲ್ಲಿ ಯಾವ ರೀತಿ ಕ್ರಮ ತೆಗೆದುಕೊಳ್ಳುತ್ತೀರೆಂದು ತಮ್ಮ ಮೂಲಕ ನಾನು ಮಾನ್ಯ ಮಂತ್ರಿಗಳಲ್ಲಿ ಕೇಳುತ್ತಿದ್ದೇನೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಸನ್ಮಾನ್ಯ ಅಧ್ಯಕ್ಷರೆ, ಅವರೇನೋ ಕೈವಾರದವರು ಕನಿಷ್ಟ ಪಕ್ಷ ನಾಲ್ಕು ಗಂಟೆ ಕಾಲ ವಿದ್ಯುಚ್ಛಕ್ತಿ ಕೊಡಿ ಎಂದರು ಎಂದು ಸನ್ಮಾನ್ಯ ವಿರೋಧಪಕ್ಷದ ನಾಯಕರು ಅದೇ 4 ಗಂಟೆ ಎಂದು ಹೇಳಿದರೆ ನಮಗೆ ಜೀವನ ಮಾಡುವುದೇ ಕಷ್ಟವಾಗುತ್ತದೆ. ಅದು ಯಾವ ಲೆಕ್ಕದಲ್ಲಿ ಹೇಳಿದರೋ? ವೈಜ್ಞಾನಿಕವಾಗಿ ನಮಗೂ ಒಂದು ಕೆಲಸದ ವೇಳೆ ಉಂಟು. ಆ ಕಾರಣ ನಮ್ಮ ಕೆಲಸದ ವೇಳೆ ಏನು ನಮಗೆ ಉದ್ಯೋಗ ಎಂತಹದು ಎಂಬುದನ್ನು ಲೆಕ್ಕ ಹಾಕಿಕೊಂಡು ನೀವು ವೇಳೆಯನ್ನು ನಿಗದಿ ಮಾಡಬೇಕೇ ಹೊರತು, ಬೆಳಿಗ್ಗೆ 6 ಗಂಟೆ ದೀಪ ತೆಗೆದರೆ ಮತ್ತೆ ಸಂಜೆ 6 ಗಂಟೆಗೆ ದೀಪ ತೆಗೆದರೆ ಹೇಗೆ? ನಾನು ಬರೀ ವ್ಯವಸಾಯದ ವಿಷಯ ಮಾತನಾಡುತ್ತಿಲ್ಲ. ನಮ್ಮ ತಾಯಂದಿರ ಕೆಲಸ ಹಾಳಾಗುತ್ತದೆ, ಮಕ್ಕಳ ಓದು ಹಾಳಾಗುತ್ತದೆ, ಆ ಕಾರಣ ಈ ಎಲ್ಲವನ್ನು ಆಲೋಚನೆ ಮಾಡಿ ಸರಿಯಾದ ಕಾಲಾವಧಿಯನ್ನು ನಿಗದಿ ಮಾಡಬೇಕು.

ಶ್ರೀ ಎಂ. ರಾಮಪ್ಪ : ಮಾನ್ಯ ಅಧ್ಯಕ್ಷರೆ, ನಿನ್ನೆ ಕೋಲಾರ ಜಿಲ್ಲೆಯ ಎಂಎಲ್‌ಎಗಳ ಜೊತೆ ಮಾತನಾಡಿದ್ದೇನೆ, ತುಮಕೂರಿನ ಎಂಎಲ್‌ಎಗಳ ಜೊತೆ ಸಹ ಮಾತನಾಡಿದ್ದೇನೆ. ಅದಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಎಲ್ಲಾ ಅಧಿಕಾರಿಗಳೊಂದಿಗೂ ಕೂಡ ಮಾತನಾಡಿದ್ದೇನೆ. ನಾವು ಬೇಗ ಮಾಡಲು ಪ್ರಯತ್ನ ಮಾಡುತ್ತಿದ್ದೇವೆ. ಮತ್ತು ಬಹಳ ಶೀಘ್ರವಾಗಿ ಮಾಡುವ ಆಶ್ವಾಸನೆಯನ್ನು ಕೊಡುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೆ, ಈ ವಿದ್ಯುಚ್ಛಕ್ತಿ ಸರಬರಾಜನ್ನು ನಂಬಿಕೊಂಡಿರುವ ನಮ್ಮ ರೈತರು ಬಹುಶಃ ಮುಕ್ತ ಇಲ್ಲವೆಂದು ಕಾಣುತ್ತದೆ. ಸುಮಾರು ನನ್ನ ತಾಲ್ಲೂಕು ಮತ್ತು ಗೌರಿಬಿದನೂರು ತಾಲ್ಲೂಕಿನ ರೈತರು 4-5 ದಿನಗಳ ಹಿಂದೆ ನನ್ನನ್ನು ಬಂದು ನೋಡಿದರು. ನಾನು ಸಹ ಈ ತಾಲ್ಲೂಕುಗಳಿಗೆ ಹೋಗಿ ಬಂದಿದ್ದೇನೆ. ಈ ತೊಂಡೆಬಾವಿ ಮತ್ತು ದೊಡ್ಡಬಳ್ಳಾಪುರದ ಫವರ್ ಸ್ಟೇಷನ್‌ನಿಂದ ಏನು ವಿದ್ಯುಚ್ಛಕ್ತಿ ಸಪ್ಲೈಯಾಗುತ್ತದೆ. ಅದರಲ್ಲಿ ಓಲ್ಟೇಜ್ ಇಲ್ಲ, ಮತ್ತು ಯಾವಾಗ ಹೋಗುತ್ತದೆ, ಯಾವಾಗ ಬರುತ್ತದೆ ಎಂದು ಯಾರೂ ಹೇಳಲು ಸಾಧ್ಯವಿಲ್ಲ. ತೊಂಡೆಬಾವಿ ಸ್ಟೇಷನ್‌ನಲ್ಲಿ ಪ್ರತಿ ದಿನ 12 ಗಂಟೆ ನಿಲುಗಡೆ ಮಾಡುತ್ತೇವೆ ಎಂದು ಹೇಳುತ್ತಾರೆ. ಒಂದು ದಿನಕ್ಕೆ 12 ಗಂಟೆ ವಿದ್ಯುಚ್ಛಕ್ತಿ ನಿಲ್ಲಿಸುತ್ತಾರೆ. ಇನ್ನು ಕೊಡುವ 12 ಗಂಟೆ ಕೂಡ ಸರಿಯಾಗಿ ಫವರ್ ಸರಬರಾಜಾಗುವುದಿಲ್ಲ. ನಾನು ಮೊನ್ನೆ

ಶನಿವಾರ, ಭಾನುವಾರ ತೋಟದಲ್ಲಿದ್ದೆ 15-20 ನಿಮಿಷಕ್ಕೆ ಒಂದೊಂದು ಸಾರಿ ಫವರ್ ಹೋಗುತ್ತಿತ್ತು. ಬೆಳಿಗ್ಗೆ 6 ಗಂಟೆ 12 ಗಂಟೆ ಕಾಲ ಕೆಲವು ದಿನ ಕೊಡುತ್ತಾರೆ, ಇನ್ನು ಕೆಲವು ದಿನ ಬೆಳಿಗ್ಗೆ 6 ರಿಂದ 12 ಗಂಟೆಯವರೆಗೆ ನಿಲ್ಲಿಸುತ್ತಾರೆ. ಮಧ್ಯಾಹ್ನ 12 ರಿಂದ 6 ಗಂಟೆ ವರೆಗೆ ಕೊಡುತ್ತಾರೆ. ಈ ಫವರ್‌ಅಡೆತಡೆಯಿಲ್ಲದೆ ಸಿಗುವುದೇ ಇಲ್ಲ, ಸುಮಾರು 20-30 ಸಾರಿ ಆಫ್ ಆಗುತ್ತದೆ. ಇದರಿಂದ ಮೋಟರುಗಳು ಕೆಟ್ಟು ಹೋಗುತ್ತವೆ, ವ್ಯವಸಾಯ ಮಾಡುವುದಕ್ಕೆ ಆಗುವುದಿಲ್ಲ, ಅಧ್ಯಕ್ಷರೆ ನಮ್ಮ ಕಡೆ ಒಂದು ತಿಂಗಳು ಎಂಟು ದಿನದಿಂದ ಒಂದು ಹನಿ ಮಳೆ ಬಂದಿಲ್ಲ, ಬೆಳೆ ಹಾಳಾಗಿದೆ ಒಂದು ಹನಿ ನೀರು ಕೆರೆಯಲ್ಲಿಲ್ಲ. ನಮ್ಮ ಕೋಲಾರ, ಬೆಂಗಳೂರು ಜಿಲ್ಲೆಗಳಲ್ಲಿ ಅದರಲ್ಲೂ ಗೌರಿಬಿದನೂರು, ದೊಡ್ಡಬಳ್ಳಾಪುರ ತಾಲ್ಲೂಕುಗಳಲ್ಲಿ ಬಹುತೇಕವಾಗಿ ನಂಬಿಕೊಂಡಿರುವುದು ಪಂಪ್‌ಸೆಟ್‌ಗಳನ್ನು ನಮ್ಮ ರೈತರು ಬೇರೆ ಬೇರೆ ಬ್ಯಾಂಕುಗಳಿಂದ ಬೇಕಾದಷ್ಟು ಸಾಲವನ್ನು ಮಾಡಿದರು. 60 ಸಾವಿರ, 70 ಸಾವಿರ ಪಂಪು ಸೆಟ್ಟುಗಳಿಗೆ ಸರ್ವೀಸ್ ಏನೋ ಕೊಟ್ಟಿದ್ದೀರಿ. ಆದರೆ ಅದರಿಂದ ರೈತ ಸಾಲಗಾರನಾಗಿದ್ದಾನೆ, ಈಗ ಇಟ್ಟಿರುವ ಬೆಳೆ ಕೈಗೆ ಸಿಗುವುದಿಲ್ಲ. ಕಡಲೇಕಾಯಿ, ಜೋಳ, ಭತ್ತ, ರಾಗಿ ಬೆಳೆ ನಿರ್ನಾಮವಾಯಿತು. ಕೋಟ್ಯಾಂತರ ರೂಪಾಯಿಗಳು ಲುಕ್ಸಾನಾಗಿದೆ. ರೈತರು ತೊಂಡೆಬಾವಿ ಫವರ್ ಸ್ಟೇಷನ್‌ಗೆ ಹೋಗಿ ಕೇಳಿದರೆ, ನಾವು ಏನೂ ಮಾಡುವುದಕ್ಕೆ ಆಗುವುದಿಲ್ಲ, ನಿಮ್ಮ ಇಷ್ಟ ಬಂದ ಹಾಗೆ ಮಾಡಿಕೊಳ್ಳಿ ಎಂದು ಹೇಳಿ ಕಳಿಸುತ್ತಾರೆ. ದೊಡ್ಡಬಳ್ಳಾಪುರದ ಫವರ್ ಸ್ಟೇಷನ್‌ಗೆ ಹೋಗಿ ಕೇಳಿದರೆ ಅವರು ಸಹ ನಾವೇನೂ ಮಾಡುವುದಕ್ಕಾಗುವುದಿಲ್ಲ. ನಿಮ್ಮ ಇಷ್ಟ ಬಂದ ಹಾಗೆ ಮಾಡಿಕೊಳ್ಳಿ, ಮೇಲೆ ಹೋಗಿ ಹೇಳಿ ಎಂದು ಹೇಳುತ್ತಾರೆ. ಇವರನ್ನು ವಿದ್ಯುತ್ ಮಂಡಲಿಯ ಛೇರ್‌ಮನ್ ಮಾಡಿದಾಗ ನಾನು ಸಂತೋಷಪಟ್ಟೆ, ಏಕೆಂದರೆ ಅವರು ಟಿಕ್ನಿಕಲ್ ಪರ್ಸನ್, ಅವರಿಗೆ ಬಡವರ ಮೇಲೆ ಅನುಕಂಪವಿದೆ, ಇನ್ನಾದರೂ ಸುಧಾರಿಸಬಹುದು ಎಂದು ಸಂತೋಷಪಟ್ಟೆ. ಆದರೆ ಅವರು ಚಾರ್ಜ್ ತೆಗೆದುಕೊಂಡ ಮೇಲೆ ಇನ್ನೂ ಹಾಳಾಯಿತು. ಯಾವಾಗ ಫೋನ್ ಮಾಡಿದರು. ಅವರು ಸಿಕ್ಕುವುದಿಲ್ಲ. ಬೆಳಿಗ್ಗೆ ಮಧ್ಯಾಹ್ನ ಪ್ರಯತ್ನ ಮಾಡಿದೆ, ಸಿಗಲಿಲ್ಲ. ಅದೇನು ಫೋನನ್ನು ತೆಗೆದಿಡುತ್ತಾರೋ, ಏನು ಮಾಡುತ್ತಾರೋ ಗೊತ್ತಾಗುವುದಿಲ್ಲ, ನನಗಂತೂ ಅವರು ಫೋನ್‌ನಲ್ಲಿ ಸಿಕ್ಕುವುದಿಲ್ಲ ಮತ್ತು ಯಾವಾಗಲೂ ಪ್ರವಾಸದಲ್ಲಿರುತ್ತಾರೆ. ಮಂತ್ರಿಗಳು ತಿಂಗಳಿಗೊಬ್ಬರು ಬದಲಾವಣೆಯಾಗುತ್ತಿದ್ದಾರೆ. ಅವರು ಬಂದು ಸಮಸ್ಯೆಯನ್ನು ಅರ್ಥಮಾಡಿಕೊಳ್ಳುವುದರೊಳಗೆ ಆ ಮಂತ್ರಿಗಳು ಬದಲಾವಣೆಯಾಗಿ ಹೋಗಿರುತ್ತಾರೆ. ಹೀಗಾಗಿ ನಮ್ಮ ಸ್ಥಿತಿ ಅಧೋಗತಿಯಾಗಿದೆ. ಇದನ್ನು ತಕ್ಷಣ ರಿಪೇರಿ ಮಾಡುವುದಕ್ಕೆ ಸರಿ ಮಾಡುವುದಕ್ಕೆ ತಮ್ಮಲ್ಲಿ ಶಕ್ತಿ ಇದ್ದರೆ ತಾವು ಅಧಿಕಾರದಲ್ಲಿರಿ. ಇಲ್ಲದಿದ್ದರೆ ಅಧಿಕಾರದಲ್ಲಿರುವುದು ಅನಾವಶ್ಯಕ. ನೀವು ಧರ್ಮಕ್ಕೆ ಕೊಡುವುದು ಅನಾವಶ್ಯಕ. ನಾವು ದುಡ್ಡು ಕೊಡುತ್ತೇವೆ. ಮೊದಲು ಕಾನೂನುಗಳನ್ನು ಬದಲಾವಣೆ ಮಾಡಿ ನಮಗೆ ಲುಕ್ಸಾನಾದಾಗ ನಿಮ್ಮ ಮೇಲೆ ಕೇಸ್ ಹಾಕಿ ನಮ್ಮ ಪರಿಹಾರವನ್ನು ತೆಗೆದುಕೊಳ್ಳುವ ವ್ಯವಸ್ಥೆ ಇದರಲ್ಲಿ ಆಗಬೇಕು. ಇದಾಗದಿದ್ದರೆ ನಮ್ಮನ್ನು ಹೇಳುವವರಿಲ್ಲ, ಕೇಳುವವರಿಲ್ಲ. ಈ ವರ್ಷ ಬೆಳೆಹೋದರೆ ನಾವು ಸುಧಾರಿಸಿಕೊಳ್ಳಬೇಕಾದರೆ 4-5 ವರ್ಷಗಳು ಬೇಕು. ಎಲ್ಲಿಂದ ತರೋಣ. ಯಾರ ಬಳಿ ಹೋಗೋಣ. ಕಳ್ಳತನ ಮಾಡೋಣವೆ? ಚಂದ್ರೇಗೌಡರು ಎರಡು ಗಂಟೆ ಕೊಡಿ ಎಂದು ಹೇಳುತ್ತಾರೆ. ಏಕೆ ಎರಡು ಗಂಟೆ? ಧರ್ಮಕ್ಕೆ ಕೊಡುತ್ತೀರ? It is our right, ನಾವು ಅದಕ್ಕಾಗಿ ಡಿಪಾಸಿಟ್ ಕೊಟ್ಟಿದ್ದೇವೆ, ಕರೆಂಟ್ ಚಾರ್ಜ್ ಕಟ್ಟುತ್ತಿದ್ದೇವೆ. ಕರೆಂಟ್ ಚಾರ್ಜ್ ಕಟ್ಟದಿದ್ದರೆ ಬಡ್ಡಿಯನ್ನು ಹಾಕುತ್ತೀರಿ, ಬೇಕಾದರೆ ನಮ್ಮ ಹತ್ತಿರ ಡಿಪಾಸಿಟ್ ವಸೂಲಿ ಮಾಡುತ್ತೀರಿ? ವಿದ್ಯುಚ್ಛಕ್ತಿಯನ್ನು 2 ಗಂಟೆ ಕೊಡಿ, 3 ಗಂಟೆ ಕೊಡಿ ಎಂದು ನಿಮ್ಮನ್ನು ಭಿಕ್ಷೆ ಬೇಡುವುದು ಅನಾವಶ್ಯಕ.

9.45 ಎ.ಎಂ.

ನಿಮಗೆ ಯೋಗ್ಯತೆ ಇದ್ದರೆ ಕೊಡಿ ಇಲ್ಲದಿದ್ದರೆ ಯಾರಿಗಾದರೂ ಪ್ರೈವೇಟ್‌ನವರಿಗೆ ಕೊಡಿ. ಸುಮ್ಮನೆ ಬಜೆಟ್ ಭಾಷಣದಲ್ಲಿ ಬೇಕಾದಷ್ಟು ಹೇಳಿದಿರಿ. ಅಷ್ಟು ಯೂನಿಟ್ ಮಾಡುತ್ತೇವೆ, ಇಷ್ಟು ಯೂನಿಟ್ ಮಾಡುತ್ತೇವೆಂದು ಹೇಳಿದಿರಿ. ಯೂನಿಟ್ ಇಲ್ಲ ಏನೂ ಇಲ್ಲ.

ಅಧ್ಯಕ್ಷರು : ಅವಿಶ್ವಾಸ ನಿರ್ಣಯದಲ್ಲಿ ಇದನ್ನೆಲ್ಲಾ ತೆಗೆದುಕೊಳ್ಳಿ.

ಶ್ರೀ ಆರ್.ಎಲ್. ಜಾಲಪ್ಪ : ಯಾವುದರಲ್ಲಿ ಹೇಳಿದರೂ ಅಷ್ಟೆ.

ಶ್ರೀ ಎಂ. ರಾಮಪ್ಪ : ಇಂಪ್ರೂವ್‌ಮೆಂಟ್ ಮಾಡಿದ್ದೇವೆ.

ಶ್ರೀ ಆರ್.ಎಲ್. ಜಾಲಪ್ಪ : ಏನು ಇಂಪ್ರೂವ್‌ಮೆಂಟ್ ಮಾಡಿದ್ದೀರಿ.

ಶ್ರೀ ಎಂ. ರಾಮಪ್ಪ: ನಾವು ಕುಳಿತುಕೊಂಡು ಮಾತನಾಡೋಣ. ನಾವು ಕೆಲಸ ಮಾಡುವುದಕ್ಕೆ ರೆಡಿ ಇದ್ದೇವೆ.

ಶ್ರೀ ಆರ್.ಎಲ್. ಜಾಲಪ್ಪ : ನಿಮ್ಮ ಅಧಿಕಾರಿಗಳು ಗೌರಿಬಿದನೂರು ಗಲಾಟೆಯಾಗಿರುವುದನ್ನು ತೊಂಡೆಬಾವಿಯಲ್ಲಿ ಗಲಾಟೆಯಾಗಿರುವುದನ್ನು ನಿಮಗೆ ತಿಳಿಸಿಲ್ಲವೆ. ಎಂ.ಎಲ್.ಎ.ಗಳು ಅಲ್ಲಿ ಹೋಗಿದ್ದಾಗ ನಿಮಗೆ ಪವರ್ ಸಪ್ಲೈ ಮಾಡುವುದಕ್ಕೆ ಯೋಗ್ಯತೆಯಿಲ್ಲವೆಂದು ಹೊಡೆದಿದ್ದಾರೆ. Gowribidanur MLA was assaulted and he was attacked. He cannot come and Speak here. ಅವರು ಇಲ್ಲಿ ಇದ್ದಾರೆ ಅವರನ್ನು ಕೇಳಿ.

ಶ್ರೀ ಎಸ್.ವಿ. ಅಶ್ವತ್ಥ ನಾರಾಯಣರೆಡ್ಡಿ : ನಮಗೆ ವಿದ್ಯುಚ್ಛಕ್ತಿ ತೊಂದರೆ ಇದೆ ಅದನ್ನು ಸರಿ ಮಾಡಿಸಿಕೊಡಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಂಡಾಗ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಯಿಸಿ ಸೂಕ್ತವಾದ ಒಂದು ಏರ್ಪಾಡನ್ನು ಮಾಡಬೇಕು? ಎಂದು ನಾವು ಎಲ್ಲಾ ಅಧಿಕಾರಿಗಳಿಗೂ ತಕ್ಷಣ ತಿಳಿಸಿದ್ದೇವೆ. ಈಗಾಗಲೇ ಹಿರಿಯೂರಿನಿಂದ ಕೂಡ ಈ ಪವರ್ ಕನೆಕ್ಷನ್ ಕೊಡಿಸಬೇಕೆಂದು ನಮ್ಮ ಚೀಫ್ ಇಂಜಿನಿಯರ್ ಮತ್ತು ಛೇರ್‌ಮನ್ ಹತ್ತಿರ ಮಾತನಾಡಿದ್ದೇವೆ. ಅಲ್ಲಿಗೂ ಕನೆಕ್ಷನ್ ಕೊಟ್ಟಿದ್ದೇವೆ. ಈಗಾಗಲೇ 16 ಗಂಟೆ ಪವರ್ ಕೊಡುತ್ತಿದ್ದುದನ್ನು 18 ಗಂಟೆಗೆ ಹೆಚ್ಚಿಸುವ ವ್ಯವಸ್ಥೆಯನ್ನು ಈಗಾಗಲೇ ಮಾಡಿದ್ದೇವೆ. ನನ್ನನ್ನು ಸದಸ್ಯರು ಹೊಡೆದರು ಎಂದು ಹೇಳಿದರು. ದಯವಿಟ್ಟು ಕ್ಷಮಿಸಬೇಕು. ಅದಕ್ಕೆ ಅವಕಾಶವಾಗಿ.

ಶ್ರೀ ಡಿ.ಬಿ. ಚಂದ್ರೇಗೌಡ : ಮಂತ್ರಿ ನೀವೋ ಅವರೋ, ಉತ್ತರ ಯಾರು ಕೊಡಬೇಕು.

(ಗೊಂದಲ)

ಶ್ರೀ ಗೋಪಾಲ ಮುಕುಂದ ಕಾನಡೆ : ಹೊಡೆದಿದ್ದಾರೆ ಅಂಥ ಹೇಳುತ್ತಿದ್ದಾರೆ ಅವರಿಗೆ ಅವಮಾನ ಅಲ್ಲವೆ?

(ಗೊಂದಲ)

ಶ್ರೀ ಆರ್. ದಯಾನಂದರಾವ್ : ಆ ಮಾತನ್ನು ವಾಪಸ್ಸು ತೆಗೆದುಕೊಳ್ಳಿ, ರೆಕಾರ್ಡ್‌ನಲ್ಲಿ ಹೋಗಿರುವುದನ್ನು ತೆಗೆದುಹಾಕಿ, ಸದಸ್ಯರಿಗೆ ಅವಮಾನ ಮಾಡಿದ ಹಾಗೆ ಆಗುತ್ತದೆ.

ಶ್ರೀ ಆರ್.ಎಲ್. ಜಾಲಪ್ಪ : ನನಗೆ ಗೊತ್ತಿರುವ ವರ್ತಮಾನ ನಿಜ. ಅವರು ಇಲ್ಲವೆಂದು ಹೇಳುತ್ತಾರೆ ಸಂತೋಷ. ನನಗೆ ಬೇಕಾಗಿರುವುದು ಪವರ್ ಸಪ್ಲೈ ಅಷ್ಟೇ ನಮಗೆ ಇನ್ನೇನು ಬೇಕಾಗಿಲ್ಲ.

ಅಧ್ಯಕ್ಷರು : ವಾಪಸ್ಸು ತೆಗೆದುಕೊಂಡಿದ್ದಾರೆ ಬಿಡಿ.

ಶ್ರೀ ಆರ್.ಎಲ್. ಜಾಲಪ್ಪ : ನಾನು ಹೇಳಿದ್ದೇನೆ. ನಾನು ಬೇರೆ ಭಾಷೆ ಉಪಯೋಗಿಸಿಲ್ಲ, ಅಲ್ಲಿ ಎಂಬ ಘಟನೆಯನ್ನು ನಾನು ತಮ್ಮ ಗಮನಕ್ಕೆ ತಂದಿದ್ದೇನೆ. ಅವರು ಇಲ್ಲವೆಂದು ಹೇಳಿದ್ದಾರೆ. ಕಡತದಿಂದ ಹೋಗಲಿ, ನನ್ನದೇನೂ ಅಭ್ಯಂತರವಿಲ್ಲ.

ಶ್ರೀ ಆರ್. ದಯಾನಂದ ರಾವ್ : ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಸದಸ್ಯರು ಗೌರಿಬಿದನೂರು ಶಾಸಕರನ್ನು ರೈತರು ಹೊಡೆದರು ಎಂದು ಹೇಳಿದರು. ಅದು ಯಾವ ಪತ್ರಿಕೆಯಲ್ಲಿ ಬಂದಿದೆ. ಅದನ್ನು ಅವರು ಎಲ್ಲಿ ನೋಡಿದ್ದಾರೆ.

ಶ್ರೀ ಆರ್.ಎಲ್. ಜಾಲಪ್ಪ : ಅಧ್ಯಕ್ಷರೆ, ನನಗೆ ವರ್ತಮಾನ ಬಂದದ್ದು ಹಾಗೆ ಅದು ಅಸತ್ಯ ಇರಬಹುದು. ಅದನ್ನು ವಾಪಸ್ಸು ತೆಗೆದುಕೊಂಡಿದ್ದೇನೆ. ನನ್ನದೇನು ಅಭ್ಯಂತರವಿಲ್ಲ, ಅದನ್ನು ವಾಪಸ್ಸು ತೆಗೆದುಕೊಳ್ಳಲಿ ಬಿಡಲಿ ಸತ್ಯ ಅಲ್ಲಿ ನಡೆದದ್ದು ಇದೆ. ಕಾನ್ಸ್‌ಸ್ಟಿಟ್ಯೂಯನ್ಸಿಯಲ್ಲಿ ಗೊತ್ತಿದೆಯೆಲ್ಲ.

ಶ್ರೀ ಗೋಪಾಲ ಮುಕುಂದ ಕಾನಡೆ : ಒಂದು ಮಾತನಾಡಿ, ಎರಡು ನೀವೆ ಕೂಡಿಸುತ್ತಿದ್ದೀರಿ, ಭಾಗಕಾರ ಮಾಡಿದ್ದಿರಲ್ಲಾ ನಿಮಗೆ ಏನು ಮಾಡಿದ್ದಾರೋ ನಮಗೂ ಅದೇ, ಅದು ಎನೂ ಬೇರೆ ಕೇಸ್ ಅಲ್ಲ.

ಶ್ರೀ ಆರ್.ಎಲ್. ಜಾಲಪ್ಪ : ಮುಖ್ಯಮಂತ್ರಿಗಳು ದಯಮಾಡಿದ್ದಾರೆ. ಮಾನ್ಯ ರಾಮಪ್ಪನವರು ಮೊನ್ನೆ ತಾನೆ ಚಾರ್ಜ್ ತೆಗೆದುಕೊಂಡಿದ್ದಾರೆ. ನಮಗೆ ಒಂದು ದಿವಸಕ್ಕೆ 12 ಗಂಟೆ ಫವರ್ ಸಪ್ಲೈ ನಿಲ್ಲಿಸಿದ್ದಾರೆ. ಪವರ್ ಪ್ರಾಜೆಕ್ಟ್ ಎಲ್ಲೆಲ್ಲಿವೆ ಅಲ್ಲಿರುವ ಎಲ್ಲಾ ಕೆರೆಗಳು ತುಂಬಿ ತುಳುಕುತ್ತಿದೆ.

ಎಕ್ಸೆಪ್ಟ್ ಒನ್ ಇರಬಹುದು. ನಮ್ಮ ಕಡೆ ಅಂದರೆ ನಮ್ಮ ಭಾಗದಲ್ಲಿ ಕಳೆದ 40 ದಿನಗಳಿಂದ ಒಂದು ಹನಿ ಮಳೆ ಬಿದ್ದಿಲ್ಲ, ನಾವು ಸಹಸ್ರಾರು ಪಂಪ್‌ಸೆಟ್ಸ್‌ನವರು ವಿದ್ಯುಚ್ಛಕ್ತಿಯನ್ನೇ ನಂಬಿಕೊಂಡಿದ್ದೇವೆ. ನಾವು ಇಟ್ಟ ಎಲ್ಲಾ ಬೆಳೆ ಹಾಳಾಗಿ ಹೋಯಿತು. ಕಡಲೆಕಾಯಿ ಇಲ್ಲ, ಮುಸುಕಿನಜೋಳ ಇಲ್ಲ, ರಾಗಿ ಇಲ್ಲ, ಭತ್ತ ಇಲ್ಲ, ಎಲ್ಲಾ ನಿರ್ನಾಮವಾಗಿವೆ. ತಾವು ಬೇಕಾದರೆ ಯಾರನ್ನಾದರೂ ಕಳುಹಿಸಿ ನೋಡಿ. ತೊಂಡೆಬಾವಿ ಪವರ್ ಡಿಸ್ಟ್ರಿಬ್ಯೂಷನ್ ಸ್ಟೇಷನ್‌ನಲ್ಲಿ ಹೋಗಿ ಕೇಳಿದರೆ ಅವರು ನಮಗೂ ಇದಕ್ಕೂ ಸಂಬಂಧವಿಲ್ಲ ನಾವು ಏನೂ ಮಾಡಲಿಕ್ಕೆ ಆಗುತ್ತದೆ 12 ಗಂಟೆ ನಿಲ್ಲಿಸಿದ್ದೇವೆ ಎಂದು ಹೇಳುತ್ತಾರೆ. ಇನ್ನು 12 ಗಂಟೆ ಕಂಟಿನ್ಯುಯಸ್ ಆಗಿ ಕೊಡಲಿಕ್ಕೆ ಅವರ ಕೈಯಲ್ಲಿ ಸಾಧ್ಯವಾಗುತ್ತಿಲ್ಲ. ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿಯೂ ನಮಗೆ ತೊಂದರೆಯಾಗಿದೆ ಮತ್ತು ಗೌರಿಬಿದನೂರು ತಾಲ್ಲೂಕಿನಲ್ಲಿಯೂ ಸಹ ನಮಗೆ ತೊಂದರೆಯಾಗಿದೆ. ಈ ಸಮಸ್ಯೆಯನ್ನು ತಾವು ಶೀಘ್ರವಾಗಿ ಪರಿಹರಿಸಿಕೊಡಬೇಕು, ಇಲ್ಲದಿದ್ದರೆ ನೀವು ಲುಕ್ಸಾನು ಆದರೂ ನಮಗೆ ಕಟ್ಟಿಕೊಡಬೇಕು. ನಾನು ತಮ್ಮಲ್ಲಿ ಒಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ಕೆಇಬಿ ಏನಿದೆ ಇದರ ಕಾನೂನುಗಳನ್ನು ಸ್ವಲ್ಪ ಬದಲಾವಣೆ ಮಾಡಿ ಈ ಪವರ್ ಸಪ್ಲೈನಿಂದ ತೊಂದರೆಯಾದಾಗ ನಮಗೆ ಏನು ಲುಕ್ಸಾನು ಆಗುತ್ತದೆ ಅದನ್ನು ಸರ್ಕಾರದಿಂದ ಅಥವಾ ಕೆಇಬಿಯಿಂದ ನಾವು ತೆಗೆದುಕೊಳ್ಳುವಂಥ ಒಂದು ವ್ಯವಸ್ಥೆ ನಮಗೆ ಮಾಡಿಕೊಡದೇ ಇದ್ದರೆ ಈ ಕೆಇಬಿಯನ್ನು ಯಾರೂ ಸರಿ ಮಾಡಲಿಕ್ಕೆ ಆಗುವುದಿಲ್ಲ. ತಾವು ಕೆಇಬಿ ಛೇರ್ಮನ್ನರನ್ನು ಮಾಡಿದಿರಿ, ನಾನು ಅದನ್ನು ಸ್ವಾಗತ ಮಾಡಿದೆ, ಅದು ತಮಗೆ ಜ್ಞಾಪಕ ಇರಬಹುದು. ಏಕೆಂದರೆ ನರಸಿಂಹಮೂರ್ತಿಯವರು ಬಂದಮೇಲೆ ಸ್ವಲ್ಪ ಉತ್ತಮವಾಗಬಹುದು, ಅವರು ರೈತ ಪರವಾಗಿದ್ದಾರೆ ಎಂದು ತಿಳಿದುಕೊಂಡಿದ್ದೆ. ಆದರೆ ನನ್ನ ದುರಾದೃಷ್ಟವೋ ಅಥವಾ ರೈತರ ದುರಾದೃಷ್ಟವೋ, ಅವರು ಬಂದಮೇಲೆ ಇನ್ನೂ ಹದಗೆಟ್ಟುಹೋಗಿದೆ. ಅವರು ಯಾವಾಗಲೂ ನಮ್ಮ ಕೈಗೆ ಸಿಕ್ಕುವುದಿಲ್ಲ. ನಾನೇ ಪರಸನಲ್ ಆಗಿ ಅವರ ಆಫೀಸಿಗೆ ಹೋಗಿ ನಮ್ಮ

ಕಷ್ಟಗಳಿನ್ನೆಲ್ಲಾ ಹೇಳಿಕೊಂಡುಬಂದಿದೆ. ಸುಮಾರು 7-8 ತಿಂಗಳು ಆಯಿತು. ಇವೊತ್ತಿನವರೆಗೂ ಅವರು ಏನೂ ಸರಿಮಾಡಲಿಕ್ಕೆ ಆಗಲಿಲ್ಲ. ಸ್ವಾಮಿ, ಆ ಸಂಕಟ ನಮಗೆ ಗೊತ್ತಿದೆ. ನಾವು ಸಾಲ ಮಾಡಿ ಬೆಳೆ ಇಟ್ಟಿದ್ದೇವೆ. ಈ ಸಾರಿ ಬೆಳೆ ಹೋಗಿದೆ ಇನ್ನು ಮೂರು ನಾಲ್ಕು ವರ್ಷಗಳು ಬೇಕು ನಾವು ಚೇತರಿಕೊಳ್ಳಲಿಕ್ಕೆ. ಇವತ್ತು ಸಾವಿರಾರು ಕುಟುಂಬಗಳು ಹಾಳಾಗುತ್ತಿವೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ನಾವು ನಿನ್ನೆಯಿಂದ ನೋಡುತ್ತಿದ್ದೇವೆ, ಏನೋ ಒಂದು ವ್ಯವಸ್ಥಿತವಾಗಿ ಇವರ ಧಾಳಿ ನಡೆಯುತ್ತಿದೆ.

ಶ್ರೀ ಆರ್.ಎಲ್. ಜಾಲಪ್ಪ : ಅಧ್ಯಕ್ಷರೆ, ಮಾನ್ಯ ಸದಸ್ಯರಿಗೆ ಕಳಕಳಿ ಇಲ್ಲ ಅಂದರೆ, ನಾನು ಮಾತನಾಡುವುದು ಬೇಡ, ಹೊರಗಡೆ ಹೋಗಿ ಎಂದರೆ ನಾನು ಹೋಗಲಿಕ್ಕೆ ತಯಾರಾಗಿದ್ದೇನೆ. ಇದು ಸರಿಯಲ್ಲ. ನನ್ನ ಕಷ್ಟ ಇವರಿಗೇನು ಗೊತ್ತಾಗಬೇಕು. ನಾನು ಕೂಡ ಸಾವಿರಾರು ರೂಪಾಯಿ ಸಾಲ ಮಾಡಿದ್ದೇನೆ ಇವರು ತೋಟಕ್ಕೆ ಬಂದು ನೋಡಲಿ, ಸುತ್ತಮುತ್ತ ಇರುವ ರೈತರ ತೋಟಗಳನ್ನು ಬಂದು ನೋಡಲಿ, ಆಗ ಅವರ ಗತಿ ಏನು ಎಂದು ಗೊತ್ತಾಗುತ್ತದೆ.

(ಗೊಂದಲ)

ಶ್ರೀ ಆರ್.ಎಲ್. ಜಾಲಪ್ಪ : ತಾವು ಭರವಸೆ ಕೊಡಬೇಕು. ತಾವು ತಕ್ಷಣ ಅಲ್ಲಿಗೆ ಯಾರನ್ನಾದರೂ ಕಳುಹಿಸಿ ಇದನ್ನು ಸರಿಮಾಡಿಸಿಕೊಟ್ಟು, ನಮಗೆ ನೀರನ್ನು ಕೊಡದೇ ಇದ್ದರೆ ನಾವೆಲ್ಲಾ ನಿರ್ನಾಮವಾಗುತ್ತೇವೆ. ನಿರ್ನಾಮವಾದರೆ, ಆಗುವ ಲುಕ್ಸಾನನ್ನು ಸರ್ಕಾರ ಕೆಇಬಿಯಿಂದ ಕಟ್ಟಿಸಿಕೊಡಬೇಕು ಎಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡತ್ತೇನೆ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆ ವಿರೋಧಪಕ್ಷದ ನಾಯಕರ ಮೂಲ ಪ್ರಶ್ನೆಯಿಂದ ಉದ್ಭವವಾಗಿರತಕ್ಕಂಥದ್ದು. ಪ್ರಶ್ನೋತ್ತರ ಕಾಲದಲ್ಲಿ ಹೆಚ್ಚು ವಿವರಣೆಗೆ ಹೋಗುವುದಕ್ಕೆ ಕಾಲದ ಅಭಾವದಿಂದ ಸಾಧ್ಯವಾಗದೇ ಇದ್ದರೂ ಸಹ ಪ್ರಾಮುಖ್ಯವಾಗಿರತಕ್ಕಂಥ ವಿಚಾರವನ್ನು ತಾರು ಎತ್ತಿದ್ದೀರಿ. ಪ್ರಾರಂಭದಲ್ಲಿ ರಾಜ್ಯದಲ್ಲಿ ಎಲ್ಲಾ ಕಡೆ ಮಳೆ ಬಿದ್ದಿದೆ. ಎಕ್ಸ್‌ಪ್ಟ್ ತುಮಕೂರು ಜಿಲ್ಲೆಯ ಕೆಲವು ಭಾಗಗಳನ್ನು ಬಿಟ್ಟು ಕೋಲಾರದಲ್ಲಿಯೂ ಕೂಡ ಮಳೆ ಬಿತ್ತು. ಸಾಕಷ್ಟು ಪ್ರಮಾಣದಲ್ಲಿ ಬಿತ್ತನೆಯೂ ಆಯಿತು. ಈಗಲೂ ಕೆಲವು ಕಡೆ ಬೆಳೆ ಇವೆ. ಆದರೂ ಅನೇಕ ಕಡೆಗಳಲ್ಲಿ ಮಳೆ ಲೇಟ್ ಆಗಿ ಬಂದಿದ್ದರಿಂದ ಬೆಳೆ ಹಾಳಾಗುತ್ತಿದೆ. ನಿನ್ನೆಯ ದಿವಸ ಮಾನ್ಯ ಸಚಿವರಾದ ಮುನಿಯಪ್ಪನವರು ಸೇರಿದಂತೆ ಇತರೆ ಸದಸ್ಯರು ನಮ್ಮ ಮನೆಯಲ್ಲಿ ಸೇರಿ ಅವರ ಜೊತೆ ನಾವೆಲ್ಲಾ ಮಾತನಾಡಿದ್ದೇವೆ. ಕುಡಿಯುವ ನೀರಿಗೂ ತೊಂದರೆಯಾಗಿದೆ ಎನ್ನತಕ್ಕ ವಿಚಾರ ಹೇಳಿದ್ದಾರೆ. ನಾವು ಈಗಾಗಲೇ ಅದರ ಬಗ್ಗೆ ಕಾರ್ಯಕ್ರಮ ತೆಗೆದುಕೊಂಡು ಹಣವನ್ನು ಕೂಡ ನಾವು ರಿಲೀಸ್ ಮಾಡುತ್ತಿದ್ದೇವೆ. ಕೋಲಾರ ಜಿಲ್ಲೆ ಪ್ರತ್ಯೇಕವಾಗಿ ಮಾಡಬೇಕಾಗುತ್ತದೆ. ಏಕೆಂದರೆ ಕುಡಿಯುವ ನೀರಿನ ಅಭಾವ ಬಂದಾಗ ಅದ್ಯತೆ ಮೇರೆಗೆ ಕೊಡಬೇಕಾಗುತ್ತದೆ. ಕೋಲಾರ ಜಿಲ್ಲೆಯಿಂದ ಬಂದಿದ್ದರು. ಅದಕ್ಕೋಸ್ಕರ ಆ ವಿಚಾರ ಹೇಳುತ್ತಿದ್ದೇನೆ. ಅದೇ ರೀತಿ ತಾವು ಹೇಳಿದಂತೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಅನೇಕ ಭಾಗಗಲ್ಲೂ ಕೂಡ ತೊಂದರೆ ಇದೆ, ತುಮಕೂರು ಜಿಲ್ಲೆಯಲ್ಲಿದೆ. ಎಲ್ಲೆಲ್ಲಿ ತೊಂದರೆಯಿದೆ ಎನ್ನುವ ಬಗ್ಗೆ ಈಗಾಗಲೇ ಕೆಲವು ವರದಿಗಳು ಬಂದಿವೆ. ಇನ್ನೂ ಕೂಡ ಕೆಲವು ವರದಿಗಳು ಕೂಡ ಬರುತ್ತಿವೆ. ನಾವು ಅದರ ಬಗ್ಗೆ ಕಾರ್ಯಕ್ರಮ ಹಾಕುತ್ತಿದ್ದೇವೆ ಅಂದರೆ ಹಣ ರಿಲೀಸ್ ಮಾಡಬೇಕು. ಬೋರ್‌ವೆಲ್ ಹಾಕಬೇಕು ಅಥವಾ ಕೆಟ್ಟಿರತಕ್ಕ ಪಂಪ್‌ಸೆಟ್ಟುಗಳನ್ನು ಸರಿಮಾಡಬೇಕು. ತಮಗೆ ಗೊತ್ತಿರುವ ಹಾಗೆ, ಕುಡಿಯುವ ನೀರಿನ ವಿಚಾರದಲ್ಲಿ ನಮಗೆ ಉಳಿದಿರುವಂಥಾದ್ದು ಅದೊಂದೇ ದಾರಿ. ಇನ್ನು ತೊಂಡೆಬಾವಿ ಸಬ್-ಸ್ಟೇಷನ್.

ದೊಡ್ಡಬಳ್ಳಾಪುರ ಸಬ್ ಸ್ಟೇಷನ್‌ಗೆ ಸಂಬಂಧಪಟ್ಟಂತೆ ಹೇಳುವುದಾದರೆ, ಮೊದಲು ತೊಂಡೆಬಾವಿ ಸಬ್ ಸ್ಟೇಷನ್‌ಗೆ ಸಂಬಂಧಪಟ್ಟಂತೆ ಹೇಳುತ್ತೇನೆ. ನಾವು ಈಗಾಗಲೇ ಎನ್.ಜಿ.ಇ.ಎಫ್.ಗೆ ಆರ್ಡರ್ ಮಾಡಿದ್ದೇವೆ. ಟ್ರಾನ್ಸ್‌ಫಾರ್ಮರ್ಸ್ ಡೆಲವರಿಯನ್ನು ನಾವು ತೆಗೆದುಕೊಳ್ಳಬೇಕಾದರೆ ಕೊನೇ ಪಕ್ಷ 2 ತಿಂಗಳು ಬೇಕಾಗುತ್ತದೆ. ಅಂದರೆ ಬೇಸಿಗೆ ಕಾಲ ಬರುವುದರೊಳಗೆ ಬರುತ್ತದೆಂದು ನಾವು ನಂಬಿದ್ದೇವೆ. 6.3 ಎಂ.ಇ.ಎ. ಟ್ರಾನ್ಸ್‌ಫಾರ್ಮರ್‌ನ್ನು ನಾವು ಅಲ್ಲಿ ಹಾಕಬೇಕಾಗುತ್ತದೆ. ಅದೇ ರೀತಿ ದೊಡ್ಡಬಳ್ಳಾಪುರದ ಬಗ್ಗೆ ಟ್ರಾನ್ಸ್‌ಫಾರ್ಮರ್ ವಿಚಾರದಲ್ಲಿ ವಿವರಗಳು ಸಧ್ಯಕ್ಕಿಲ್ಲ. ನಾನು ಶ್ರೀಮಾನ್ ನರಸಿಂಹಮೂರ್ತಿಯವರ ಬಗ್ಗೆ ಹೊಗಳುತ್ತಿದ್ದೇನೆಂದು ದಯವಿಟ್ಟು ತಾವು ತಿಳಿದುಕೊಳ್ಳಬಾರದು. ಇಲ್ಲಿ ಆಫೀಸರ್‌ಗಳನ್ನು ಹೊಗಳುವುದು, ತೆಗಳುವುದು ಸರಿಯಲ್ಲ. ಸರಿಯಾಗಿ ಮಾಡಲಿಲ್ಲ ಎಂದರೆ, ಅವರು ಸರಿಯಾಗಿಲ್ಲವೆಂದು ನಾನು ಒಪ್ಪಿಕೊಳ್ಳುತ್ತೇನೆ. ರೈತರ ಪಂಪ್‌ಸೆಟ್ಟುಗಳ ಬಗ್ಗೆ ತಾವು ಬಹಳ ಪ್ರಮುಖವಾದ ಪ್ರಶ್ನೆಯನ್ನು ಕೇಳಿದ್ದೀರಿ. 1990-91 ಕ್ಕೆ ಸಂಬಂಧಪಟ್ಟಂತೆ ಟೋಟಲ್ ಟಾರ್ಗೆಟ್ 40 ಸಾವಿರ ಪಂಪ್‌ಸೆಟ್ಟುಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುವುದು ಇತ್ತು. ನನಗೆ ಆ ಸಂಖ್ಯೆ ಚೆನ್ನಾಗಿ ಗೊತ್ತಿದೆ. ನಾನು ಎಷ್ಟೋ ಸಾರಿ ಉತ್ತರವನ್ನು ಹೇಳಿದ್ದೇನೆ. ಅದೇ ವರ್ಷಕ್ಕೆ ನಾನು 60 ಸಾವಿರಕ್ಕೆ ಏರಿಸಿದ್ದೇನೆ. ಇದು ತಮಗೂ ಕೂಡ ಗೊತ್ತಿದೆ. ಅದು ಕೇವಲ 60 ಸಾವಿರಕ್ಕೇ ನಿಲ್ಲಲಿಲ್ಲ. ಇದನ್ನು ನಾನು ಹೊಗಳುತ್ತಿಲ್ಲ. ನನ್ನಲ್ಲಿ ಅಂಕಿಅಂಶಗಳಿವೆ. ನಾವು 60 ಸಾವಿರಕ್ಕೆ ನಮ್ಮ ಟಾರ್ಗೆಟ್‌ನ್ನು ಏರಿಸಿದರೂ ಕೂಡ ಸುಮಾರು 76-78 ಸಾವಿರ ಪಂಪ್ ಸೆಟ್ಟುಗಳಿಗೆ ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡಿದ್ದೇವೆ. ಇದು ಹೇಗೆ ಆಗಿದೆ ಎಂದರೆ, ಇಲ್ಲಿ ನಾವು ಮಾತನಾಡುತ್ತಿರುತ್ತೇವೆ, ಅಲ್ಲಿ ಬೋರ್‌ವೆಲ್‌ಗಳನ್ನು ಕೊರೆಯುತ್ತಲೇ ಇರುತ್ತಾರೆ. ನಮಗೆ ಕನೆಕ್ಷನ್ ಕೊಡಿ ಎಂದು ರೈತರಿಂದ ಅರ್ಜಿಗಳು ಆಯಾಯ ವಿದ್ಯುಚ್ಛಕ್ತಿ ಆಫೀಸ್‌ಗಳಿಗೆ ಬರುತ್ತಲೇ ಇರುತ್ತವೆ. ನಾವು ಏನು ಮಾಡಿದ್ದೇವೆಂದರೆ 3 ಫೇಸ್ಸ್ ಇದ್ದುದನ್ನು 5 ಫೇಸ್ಸ್‌ಗೆ ಹೆಚ್ಚಿಸಿದ್ದೇವೆ. ಬೋರ್ಡ್ ಮೀಟಿಂಗ್‌ನಲ್ಲಿ ನಾನೇ ತೀರ್ಮಾನ ತೆಗೆದುಕೊಂಡು ಆದೇಶ ಕೊಟ್ಟಿದ್ದೇನೆ. ಆದಾದಮೇಲೆ ಹೆಚ್ಚಿಗೆ ಕವರ್ ಮಾಡಲಿಕ್ಕೆ ಸಾಧ್ಯವಾಯಿತು. ಬ್ಯಾಕ್‌ಲಾಗ್‌ನ್ನೂ ಕೂಡ ನಾವು ಕವರ್ ಮಾಡಲಿಕ್ಕೆ ಸಾಧ್ಯವಾಗಿದೆ. ಈಗ ಸದನದಲ್ಲಿ ಮಾನ್ಯ ಬೈರೇಗೌಡರು ಇಲ್ಲ. ಅವರು ಚೆನ್ನಾಗಿಲ್ಲ ಎಂದು ಹೇಳಿದಮೇಲೆ ನಾನು ಕುಮಾರಕೃಪ ಗೆಸ್ಟ್ ಹೌಸ್‌ನಲ್ಲಿ ಒಂದು ಮೀಟಿಂಗ್ ಮಾಡಿದೆ.

ಆ ಮೀಟಿಂಗ್ ಎಲ್ಲಾ ಪಕ್ಷದ ಸದಸ್ಯರೂ ಬಂದಿದ್ದರು. ನಾವು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೆವು. ಟ್ರಾನ್ಸ್‌ಫಾರ್ಮರ್‌ಗಳನ್ನು ಅರ್ಜಿಂಟಾಗಿ ತರಿಸಿ ಕಳುಹಿಸಿಕೊಟ್ಟೆವು. ಕೊನೆಗೆ ಇದೇ ಸದನದಲ್ಲಿ ಮಾನ್ಯ ಸದಸ್ಯರು ಕೆ.ಇ.ಬಿ.ಛೇರ್ಮನ್‌ರವರು ಬಹಳ ಒಳ್ಳೆಯ ಕೆಲಸವನ್ನು ಮಾಡಿದರು. ನಮಗೆ ಬಹಳ ಸಂತೋಷವಾಯಿತು ಎಂದು ಹೇಳಿದರು. ಇದು ಮಾನ್ಯ ಎಂ.ವಿ. ವೆಂಕಟಪ್ಪನವರಿಗೂ ಕೂಡ ಗೊತ್ತಿದೆ. ಅದು ರೆಕಾರ್ಡ್‌ನಲ್ಲಿದೆ. ನಾನು ಪ್ರಸ್ತಾಪಮಾಡಿ ಹೊಗಳಿಕೊಳ್ಳುವುದಕ್ಕೆ ತಯಾರಿಲ್ಲ. ಕೆ.ಇ.ಬಿ. ಇವತ್ತು ಬಹಳ ವಿಚಾರಗಳಲ್ಲಿ ಸಫರ್ ಮಾಡುತ್ತಿದೆ. ಇಲ್ಲ ಎಂದು ನಾನು ಹೇಳುವುದಿಲ್ಲ. ನಾವು ಸಾಕಷ್ಟು ಪ್ರಮಾಣದಲ್ಲಿ ಕೆ.ವಿ.ಲೈನ್‌ನ್ನು ಹಾಕುವುದು, ಪಂಪ್‌ಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಕೊಡುವುದು ಇಂತಹ ಕೆಲಸಗಳನ್ನು ತೆಗೆದುಕೊಂಡಿದ್ದೇವೆ. ಹಿಂದಿನ ಅಂಕಿಅಂಶಗಳ ಆಧಾರದ ಮೇಲೆ ಸಂದರ್ಭ ಬಂದಾಗ ಮೇಲೆ ನಾನು ಮಾತನಾಡುತ್ತೇನೆ. ಇದರಲ್ಲಿ ಬಹಳ ಇಂಪ್ರೂವ್‌ಮೆಂಟ್ ಆಗಿದೆ. ಅದು ಇನ್ನೂ ಆಗಬೇಕೆಂಬ ತಮ್ಮ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ. ವಿವರಗಳನ್ನು ಆಮೇಲೆ ತೆಗೆದುಕೊಂಡು ನಾನು ಉತ್ತರ ಕೊಡುತ್ತೇನೆ. ಆದರೆ ಪ್ರಶ್ನೋತ್ತರ ಕಾಲದಲ್ಲಿ ಅಷ್ಟೊಂದು ವಿವರವಾಗಿ ಹೋಗುವುದಕ್ಕೆ ಸಾಧ್ಯವಾಗುವುದಿಲ್ಲ. ದಯವಿಟ್ಟು ಕ್ಷಮಿಸಬೇಕು.